

## ‘ಇಬ್ಬಡ್ಲ’ಕ್ಕೆ ಅಕ್ಕಿಯ ನಂಟು

ನವರಾತ್ರಿಯಿಂದ ದೀಪಾವಳಿ ಆಕ್ಕೈರುವರೆಗೆ ಸಿಗುವ ‘ಇಬ್ಬಡ್ಲ’ ಕಾಯಿ (ಬಣ್ಣದ/ಬಣ ಸೌತೆ ಪ್ರಭೇದದ ತರಕಾರಿ) ಬಿರುಸಿನ ಮುಂಗಾರು ಮಳೆಗಾಲದಲ್ಲೂ ಮಾರಾಟಕ್ಕೆ ಲಭ್ಯವಿದ್ದದ್ದನ್ನು ನೋಡಿ ಖುಷಿಯಾಗಿ ಖರೀದಿಸಿದೆ. ಅದನ್ನು ಪರಿಚಯದ ಲಕ್ಷ್ಮೀದೇವಮ್ಮರಿಗೆ ಕೊಟ್ಟು, ‘ಇದಿನ್ನೂ ಕಾಯಿ, ಥಂಡಿ ವಾತಾವರಣಕ್ಕೆ ಹಣ್ಣಾಗಲು ನಾಲ್ಕೈದು ಬೇಕು’ ಎಂದೆ. ಅವರು ಅದನ್ನು ಅಕ್ಕಿಯಲ್ಲಿ ಹುದುಗಿಟ್ಟರು. ಅದಕ್ಕೆ ಕಾರಣ ವಿಚಾರಿಸಿದಾಗ, ‘ಹೀಗೆ ಮಾಡಿದರೆ ಒಂದೇ ದಿನದಲ್ಲೇ ಕಾಯಿ ಹಣ್ಣಾಗುತ್ತದೆ’ ಎಂದರು. ಮಾರನೇ ದಿನ ಅವರ ಮನೆಯತ್ತ ಹೋದಾಗ ಇಬ್ಬಡ್ಲ ಘಮ ನನ್ನನ್ನು ಸ್ವಾಗತಿಸಿತು. ಅಕ್ಕಿಯ ಬಾಕ್ಸ್‌ನಲ್ಲಿ ಇಬ್ಬಡ್ಲವನ್ನು ಮುಚ್ಚಿಟ್ಟರೂ ಅದರ ಘಮ ಮುಚ್ಚಿಡಲಾದೀತೆ ಅನಿಸಿತು. ನನ್ನ ಎದುರೇ ಅಕ್ಕಿಯಿಂದ ಅನ್ನು ಹೊರತೆಗೆದರು. ಅದಾಗಲೇ ಕಾಯಿ ಮಾಗಿ ಮೆತ್ತಗಾಗಿತ್ತು. ಇದರಿಂದ ಮಾಡಿದ ರಸಾಯನ ತುಂಬಾ ರುಚಿಕರ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಬಲು ರುಚಿಯ ‘ಬಯಕೆಯೂಟ’

ಉತ್ತರ ಕರ್ನಾಟಕದ ಬೀದರ್ ಹಾಗೂ ಕಲಬುರಗಿ ಭಾಗಗಳಲ್ಲಿ ಮನೆ ಮಗಳ ಚೊಚ್ಚಲ ಬಸುರಿಗೆ ವಿಶೇಷ ಶಾಸ್ತ್ರ ಮಾಡಲಾಗುತ್ತದೆ. ಆಕೆಗೆ ಏಳು ತಿಂಗಳು ತುಂಬಿದಾಗ ತವರು ಮನೆಯವರು ಬಯಕೆ ಊಟ ಮಾಡಿ ಉಣಬಡಿಸುತ್ತಾರೆ. ಅಂಥದ್ದೇ ಒಂದು ‘ಬಯಕೆಯೂಟ’ದ ದೃಶ್ಯವಿದು.

ಬಯಕೆ ಊಟದ ಮೆನುವಿನಲ್ಲಿ ಸಿಹಿ, ಹುಳಿ ಮತ್ತು ಖಾರದ ವೈವಿಧ್ಯಮಯ ತಿನಿಸುಗಳಿರುತ್ತವೆ. ಸಿಹಿಯಲ್ಲಿ ಶೇಂಗಾ ಹೋಳಿಗೆ, ಮಾಲಿದಿ, ಕರ್ಜಿಕಾಯಿ, ಉಂಡಿ ಮತ್ತು ಶಂಕರ ಪೋಳಿ ಮುಂತಾದವುಗಳು ಮುಖ್ಯವಾಗಿರುತ್ತವೆ. ಖಾರದ ತಿನಿಸುಗಳಲ್ಲಿ ಚಕ್ಕುಲಿ, ಕೋಡುಬಳೆ ಮತ್ತು ಚೂಡಾ ಇವು ಮುಖ್ಯವಾಗಿರುತ್ತವೆ. ಇದರೊಂದಿಗೆ ಜೋಳದ ರೊಟ್ಟಿ, ಸಜ್ಜೆರೊಟ್ಟಿ, ಬೆರಕೆ ರೊಟ್ಟಿ, ಚಪಾತಿ ಇದ್ದು ಅವುಗಳಿಗೆ ನೆಂಚಿಕೊಳ್ಳಲು ಶೇಂಗಾ ಹಿಂಡಿ, ಗುರೆಳ್ಳು ಹಿಂಡಿ, ಅಗಸೆ ಹಿಂಡಿ, ಕೊಬ್ಬರಿ ಹಿಂಡಿ ಉಪ್ಪಿನಕಾಯಿ, ಬದನೆಕಾಯಿ ಎಣ್ಣೆಗಾಯಿ ಪಲ್ಯ, ಗಟ್ಟಿತೊವ್ವೆ, ಕಾಳಿನ ಪಲ್ಯ, ಮೊಸರು ಮತ್ತು ಬೆಣ್ಣೆ ಇವು ಪ್ರಮುಖವಾಗಿರುತ್ತವೆ. ಇದರೊಂದಿಗೆ ಚಿತ್ರಾನ್ನ, ಮೊಸರನ್ನ ಮತ್ತು ಹುಳಿನುಚ್ಚು ಕೂಡ ಇರುತ್ತದೆ. ಈ ಊಟವನ್ನು ಗರ್ಭಿಣಿಯೊಂದಿಗೆ ಅಲ್ಲಿ ನೆರೆದ ನೆಂಟರಿಷ್ಟರೆಲ್ಲರು ಸವಿಯುತ್ತಾರೆ. ನೆಂಟರಿಷ್ಟರಿಗೂ, ಸುತ್ತಮುತ್ತಲಿನ ಮನೆಯವರಿಗೂ ಆಹ್ವಾನವಿರುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್





## ಊಟ ತನ್ನಿಚ್ಛೆ, ನೋಟ ಪರರಿಚ್ಛೆ

‘ಜರ್ಮನಿಯ ಐಸ್ ಕೆಫೆಯೊಂದಕ್ಕೆ ಸ್ನೇಹಿತನೊಟ್ಟಿಗೆ ಹೋಗಿದ್ದೆ. ಸ್ನೇಹಿತ ಐಸ್‌ಕ್ರೀಮ್ ಅನ್ನು ಬಿಸಿ ಬಿಸಿ ಕಾಫಿಯೊಂದಿಗೆ ಅದ್ದಿ ತಿನ್ನುತ್ತಿದ್ದ’ ಎಂದು ಮಗ ಅಲ್ಲಿಂದ ಬಂದ ಬಳಿಕ ಹೇಳಿದ. ಅದನ್ನು ಕೇಳಿ ನಾನು ಹೀಗೂ ಉಂಟೆ ಎಂದು ಅಚ್ಚರಿಗೊಳಗಾದೆ. ವಿದೇಶದಲ್ಲಿ ಊಟದ ಮಿಕ್ಸ್‌ಅಪ್ ಕಾಂಬಿನೇಷನ್ ಈಗ ಫುಡ್ ಟ್ರೆಂಡ್ ಅನ್ನುವುದು ತಿಳಿದು ಸುಮ್ಮನಾದೆ. ಇಡ್ಲಿಗೆ ಚಟ್ನಿ ಅಥವಾ ಸಾಂಬಾರ್, ಚಪಾತಿಗೆ ಪಲ್ಯ, ಹೋಳಿಗೆಗೆ ತುಪ್ಪ, ಮುದ್ದೆಗೆ ಸಾರು ಹೀಗೆ... ನಮ್ಮಲ್ಲಿ ಊಟಕ್ಕೆ ಇಂತಹದ್ದೇ ಕಾಂಬಿನೇಷನ್ ಅನ್ನೋ ಪರಿಕಲ್ಪನೆ ಇದೆ. ಈ ಕಾಂಬಿನೇಷನ್ ಈಚೆಗೆ ನಮ್ಮಲ್ಲೂ ಹಾದಿ ತಪ್ಪುತ್ತಿರುವುದು ಅಲ್ಲಲ್ಲಿ ಕಾಣಬಹುದು. ಖಾದ್ಯಗಳನ್ನು ಅವುಗಳ ಕಾಂಬಿನೇಷನ್ ಹೊರತಾದ ಬೇರೆ ಬೇರೆ ಖಾದ್ಯಗಳೊಂದಿಗೆ ತಿನ್ನುವ ಖಯಾಲಿ ಹೆಚ್ಚಾಗುತ್ತಿದೆ. ಇದನ್ನು ಕಂಡ ಮೇಲೆ ‘ಊಟ ತನ್ನ ಇಚ್ಛೆ ನೋಟ ಪರರಿಚ್ಛೆ’ ಎಂಬ ಮಾತು ನೆನಪಿಗೆ ಬಂತು. ಮಗನ ಮಾತು ಕೇಳಿ ನಾನೂ ಒಮ್ಮೆ ಪ್ರಯತ್ನಿಸಬಹುದೇ ಅಂತ ಅನಿಸಿದ್ದಂತೂ ನಿಜ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ